

بِسۡمِ اللّٰہِ الرَّحۡمٰنِ الرَّحِیۡمِ

# ಇಮಾಮ್‌ರ ಆವಶ್ಯಕತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **17-11-2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಒಂದು ಪದ್ಯದಲ್ಲಿ ಹೀಗೆ ಹೇಳುತ್ತಾರೆ:

**ವಖ್ತ್ ಥಾ ವಖ್ತೇ ಮಸೀಹಾ, ನ ಕಿಸೀ ಔರ್ ಕಾ ವಖ್ತ್**

**ಮೈಂ ನ ಆತಾ ತೋ ಕೊಯೀ, ಔರ್ ಹೀ ಆಯಾ ಹೋತಾ.**

(ಇದು ಮಸೀಹ್ ಆಗಮಿಸುವ ಕಾಲವೇ ಆಗಿತ್ತು. ನಾನು ಬರದಿರುತ್ತಿದ್ದರೆ ಬೇರೆ ಯಾರಾದರೂ ಮಸೀಹರಾಗಿ ಆಗಮಿಸುತ್ತಿದ್ದರು.) ಮಸೀಹ್ ಮೌಊದ್ ಅಲೈಹಿಸ್ಸಲಾಮರು ಆಗಮಿಸಿದ ಆ ಕಾಲಘಟ್ಟ ಹೇಗಿತ್ತೆಂದರೆ ಆ ಕಾಲದ ಮುಸ್ಲಿಮರ ಸ್ಥಿತಿಯನ್ನು ನೋಡಿ ನೋವನ್ನು ಹೊಂದಿದ್ದ ಮುಸ್ಲಿಮರಿಗೆ ಅತ್ಯಂತ ಆತಂಕಭರಿತ ಕಾಲಘಟ್ಟವಾಗಿತ್ತು. ಲಕ್ಷಾಂತರ ಮುಸ್ಲಿಮರು ಕ್ರೈಸ್ತರಾಗಿ ಪರಿವರ್ತನೆ ಹೊಂದಿದ ಕಾಲ ಅದಾಗಿತ್ತು. ಅದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸು ಪ್ರಕಾರ ಸತ್ಯವಿಶ್ವಾಸ ಸುರಯ್ಯಾ ನಕ್ಷತ್ರವನ್ನು ತಲಪಿದ ಕಾಲವಾಗಿತ್ತು. ಮುಸ್ಲಿಮರಲ್ಲಿ ಕರ್ಮರೂಪದಲ್ಲಿ ಧರ್ಮವಿರಲಿಲ್ಲ. ಇಸ್ಲಾಮಿನ ವಾಸ್ತವಿಕ ರೂಪ ಬಾಕಿಯಾಗಿ ಉಳಿದಿರಲಿಲ್ಲ. ಇಸ್ಲಾಮಿನ ಬಗ್ಗೆ ವ್ಯಥೆ ಹೊಂದಿದ್ದವರು ಒಬ್ಬ ಮಸೀಹರು ಆಗಮಿಸಿ ಇಸ್ಲಾಮಿನ ಅಲೆದಾಡುತ್ತಿರುವ ನೌಕೆಯನ್ನು ಸಂರಕ್ಷಿಸಬೇಕೆಂಬ ಪ್ರತೀಕ್ಷೆಯಲ್ಲಿದ್ದರು. ಆ ಪೈಕಿ ಒಬ್ಬರು ಹಝ್ರತ್ ಸೂಫೀ ಅಹ್ಮದ್ ಜಾನ್ ಸಾಹಿಬ್ ಲುಧಿಯಾನವಿ ಆಗಿದ್ದರು. ಅವರ ಪ್ರಸಿದ್ಧಿ ದೂರ ದೂರದ ತನಕ ವ್ಯಾಪಿಸಿತ್ತು. ಅವರಿಗೆ ಅನೇಕ ಶಿಷ್ಯರಿದ್ದರು. ಅವರ ಹಿರಿಮೆಯ ಕಾರಣ ಒಮ್ಮೆ ಜಮ್ಮುವಿನ ಮಹಾರಾಜ ಅವರೊಂದಿಗೆ ಅಪೇಕ್ಷಿಸಿದ್ದರು, ತಾವು ಜಮ್ಮುವಿಗೆ ಆಗಮಿಸಿ ನನಗೋಸ್ಕರ ಪ್ರಾರ್ಥಿಸಿರಿ ಎಂದು. ಆದರೆ ಅವರು ಅದನ್ನು ನಿರಾಕರಿಸಿ ಹೇಳಿದರು: ನನ್ನಿಂದ ಪ್ರಾರ್ಥನೆ ಮಾಡಿಸಬೇಕಾಗಿದ್ದರೆ ನನ್ನ ಬಳಿಗೆ ನೀವು ಬನ್ನಿರಿ ಎಂದು. ಒಟ್ಟಾರೆ ಹೇಳುವುದಾದರೆ ಅನೇಕ ಗಣ್ಯರು ಅವರ ಶಿಷ್ಯರಾಗಿದ್ದರು. ಹಝ್ರತ್ ಸೂಫೀ ಅಹ್ಮದ್ ಜಾನ್ ಸಾಹೇಬರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಆರಂಭದಿಂದಲೇ ಬಹಳ ಆದರಭಾವನೆಯಿತ್ತು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಯಾವುದೇ ವಾದ ಪ್ರಕಟಿಸಿರಲಿಲ್ಲ. ಅದಕ್ಕೆ ಮೊದಲೇ ಸೂಫೀ ಸಾಹಿಬರು ನಿಧನ ಹೊಂದಿದ್ದರು. ಸೂಫೀ ಸಾಹಿಬರು ಆ ಕಾಲದ ಪರಿಸ್ಥಿತಿಯನ್ನು ನೋಡಿ ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ವಿನಂತಿ ಮಾಡಿದ್ದರು:

**ಹಮ್ ಮರೀಝೋಂ ಕಿ ಹೈ ತುಮ್‌ಹೀ ಪೆ ನಿಗಾಹ್**

**ತುಮ್ ಮಸೀಹಾ ಬನೋ ಖುದಾ ಕೇಲಿಯೇ.**

(ಆಧ್ಯಾತ್ಮಿಕ ರೋಗ ಪೀಡಿತರಾದ ನಾವು ನಿಮ್ಮ ಮೇಲೆಯೇ ದೃಷ್ಟಿ ಇರಿಸಿದ್ದೇವೆ. ನೀವು ಅಲ್ಲಾಹನಿಗೋಸ್ಕರ ಮಸೀಹ (ಚಿಕಿತ್ಸಕ) ಆಗಿರಿ.)

ನಾನು ಹೇಳಿದಂತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ವಾದಗಳನ್ನು ಪ್ರಕಟಿಸುವ ಮೊದಲೇ ಸೂಫೀ ಸಾಹಿಬರು ನಿಧನ ಹೊಂದಿದ್ದರು. ಆದರೆ ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಅವರೇ ಕಾಲಘಟ್ಟದ ಇಮಾಮ್ ಮತ್ತು ಮಸೀಹ್ ಮೌಊದ್ ಆಗುವರೆಂದು ದೃಢವಿಶ್ವಾಸವಿತ್ತು. ಆದುದರಿಂದ ಅವರು ತನ್ನ ಮಕ್ಕಳಿಗೆ ಮತ್ತು ಶಿಷ್ಯರಿಗೆ ಉಪದೇಶಿಸಿದ್ದರು- ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಾದಿಸಿದ ಕೂಡಲೆ ಅವರನ್ನು ನಂಬಿ ಅವರ ಅನುಯಾಯಿಗಳಾಗಬೇಕೆಂದು. ಇಸ್ಲಾಮಿನ ಅಲೆದಾಡುತ್ತಿರುವ ನೌಕೆಯನ್ನು ಆ ಕಾಲದಲ್ಲಿ ಯಾರಿಗಾದರೂ ಸಂರಕ್ಷಿಸಲು ಸಾಧ್ಯವಿದ್ದರೆ ಅದು ಖಾದಿಯಾನಿನ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರಿಗೆ ಮಾತ್ರ ಎಂದು ಆ ಕಾಲದ ಬುದ್ಧಿಶಾಲಿಗಳಾದ ಜನರು ಮನವರಿಕೆ ಮಾಡಿದ್ದರು. ಏಕೆಂದರೆ ಅವರು ಬರಾಹೀನೆ ಅಹ್ಮದಿಯಾ ಎಂಬ ಗ್ರಂಥವನ್ನು ಬರೆದು ಇಸ್ಲಾಮಿನ ಶತ್ರುಗಳ ಬಾಯಿ ಮುಚ್ಚಿಸಿದ್ದರು. ಅವರು ತನ್ನ ವಾದ ಪ್ರಕಟಿಸುವ ಮೊದಲು ದೊಡ್ಡ ದೊಡ್ಡ ವಿದ್ವಾಂಸರು ಸಹ ಅವರ ಬಗ್ಗೆ ಆದರ ಭಾವವನ್ನು ಹೊಂದಿದ್ದರು. ಆದರೆ ಅವರು ಅಲ್ಲಾಹನ ಅನುಮತಿ ಪ್ರಕಾರ ವಾದಗಳನ್ನು ಪ್ರಕಟಿಸಿದಾಗ ಆ ಮತಪಂಡಿತರು ತಮ್ಮ ಸ್ವಾರ್ಥ ಹಿತಗಳಿಗನುಸಾರವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ವಿರೋಧಿಸಲು ಪ್ರಾರಂಭಿಸಿದರು. ಇಂದಿನ ತನಕ ಇಂತಹ ಸ್ವಾರ್ಥ ಹಿತಾಸಕ್ತಿಗಳಾದ ಮತಪಂಡಿತರು ಅವರನ್ನು ವಿರೋಧಿಸುತ್ತಾ ಇದ್ದಾರೆ. ಅವರು ಜನಸಾಮಾನ್ಯರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಮತ್ತು ಅವರ ಜಮಾಅತಿನ ವಿರುದ್ಧ ದ್ವೇಷವನ್ನು ಹುಟ್ಟಿಸುತ್ತಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಗ್ರಂಥಗಳ ಮೂಲಕ, ಭಾಷಣಗಳ

ಮೂಲಕ ಮತ್ತು ಸಭೆಗಳಲ್ಲಿ ಹೇಳಿಕೆಗಳ ಮೂಲಕ ತನ್ನ ವಾದಗಳ ಸತ್ಯತೆಗೆ ಸಾಕ್ಷ್ಯಾಧಾರಗಳನ್ನು ನೀಡಿದರು. ಕಾಲಘಟ್ಟದ ಆವಶ್ಯಕತೆಗೆ ಅನುಸಾರವಾಗಿ ಮಸೀಹ್ ಮೌಊದ್ ಆಗಮಿಸಿದ ಬಗ್ಗೆ ಮತ್ತು ಅಲ್ಲಾಹನ ಸಹಾಯ ತನಗೆ ಲಭಿಸಿದ ಬಗ್ಗೆ ಅವರು ವಿವರಿಸಿದರು. ಶುದ್ಧ ಹೃದಯ ಹೊಂದಿದವರಿಗೆ ಸತ್ಯ ಮನವರಿಕೆ ಆಯಿತು. ಆದರೆ ಯಾರ ಹೃದಯಗಳಲ್ಲಿ ದ್ವೇಷ, ಅಸೂಯೆ, ಸ್ವಾರ್ಥಭಾವನೆ ಇತ್ತೋ ಅಂತಹ ಜನರಿಗೆ ಮನವರಿಕೆ ಆಗಲಿಲ್ಲ.

ಈಗ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪ್ರಸ್ತಾಪಿಸಿದ ಕೆಲವು ಸಾಕ್ಷ್ಯಾಧಾರಗಳನ್ನು ವಿವರಿಸುವೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನಮ್ಮ ವಾದಗಳನ್ನು ಬದಿಗಿರಿಸಿ, ಅವು ಬೇರೆಯೇ ಇರಲಿ. ಆದರೆ ನೀವು ಯೋಚಿಸಿ ಉತ್ತರ ನೀಡಿರಿ, ನನ್ನನ್ನು ಸುಳ್ಳು ಹೇಳುವವನೆಂದು ಆರೋಪಿಸುವುದಾದರೆ ನೀವು ಇಸ್ಲಾಮನ್ನು ಕೈ ಬಿಡಬೇಕಾಗಬಹುದು. ನಾನು ಸತ್ಯವಾಗಿ ಹೇಳುತ್ತೇನೆ, ಪವಿತ್ರ ಖುರ್‌ಆನಿನ ವಾಗ್ದಾನಗಳ ಪ್ರಕಾರ ಅಲ್ಲಾಹನು ತನ್ನ ಧರ್ಮದ ಸಂರಕ್ಷಣೆ ಮಾಡಿರುವನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿ ಈಡೇರಿದೆ. ಏಕೆಂದರೆ ಅತೀ ಅಗತ್ಯವಾಗಿದ್ದ ಈ ಕಾಲದಲ್ಲಿ, ಅಲ್ಲಾಹನ ವಾಗ್ದಾನ ಪ್ರಕಾರ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶುಭವಾರ್ತೆ ಪ್ರಕಾರ ನಾನು ಆಗಮಿಸಿರುವೆನು. ಅಲ್ಲಾಹನೇ ಈ ಜಮಾಅತನ್ನು ಸ್ಥಾಪಿಸಿದ್ದಾನೆ. **ಸದಖಲ್ಲಾಹು ವ ರಸೂಲಹೂ** ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಮಾತುಗಳು ಸತ್ಯವಾದುವು. ಇವುಗಳನ್ನು ಸುಳ್ಳೆಂದು ಹೇಳುವವನು ಅಕ್ರಮಿಯಾಗಿದ್ದಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ 1903ರಲ್ಲಿ ಹೀಗೆ ಹೇಳಿದರು: ನಾನು ನನ್ನ ವಾದವನ್ನು ಪ್ರಕಟಿಸಿ ಇಪ್ಪತ್ತೆರಡು ವರ್ಷಗಳು ದಾಟಿಹೋಗಿವೆ. ಅಲ್ಲಾಹನ ಸಹಾಯಗಳು ನನ್ನ ಜೊತೆಗಿವೆ. ನಾನು ಸುಳ್ಳು ಹೇಳುವವನಾಗಿದ್ದರೆ ಅಲ್ಲಾಹನ ಈ ಸಹಾಯಗಳು ನನಗೆ ಹೇಗೆ ಲಭಿಸಿದುವು? ಇದು ಕಾಲಘಟ್ಟದ ಆವಶ್ಯಕತೆಯಾಗಿದೆ. ಈ ಕಾಲಘಟ್ಟದಲ್ಲಿ ಮಸೀಹ್ ಆಗಮಿಸಬೇಕಾಗಿತ್ತು ಎಂದು ಎಲ್ಲರೂ ಅಂಗೀಕರಿಸುತ್ತಾರೆ. ಮಸೀಹ್ ಆಗಮಿಸುವ ಆವಶ್ಯಕತೆ ಇರುವುದಾದರೆ, ನಾನು ಮಸೀಹ್ ಅಲ್ಲವಾದರೆ, ನೀವು ಬೇರೆ ಒಬ್ಬನನ್ನು ಮುಂದೆ ತನ್ನಿರಿ. ಒಟ್ಟಿನಲ್ಲಿ ಮುಸ್ಲಿಮರ ಸುಧಾರಣೆಗೆ ಒಬ್ಬ ಮಸೀಹ್ ಆಗಮಿಸುವುದು ಆವಶ್ಯಕವಾಗಿತ್ತು. ಏಕೆಂದರೆ ಈ ಕಾಲಘಟ್ಟದಲ್ಲಿ ಭ್ರಷ್ಟತೆ ಅತ್ಯಂತ ಹೆಚ್ಚಾಗಿದೆ. ಮುಸ್ಲಿಮರಲ್ಲಿಯೂ ಭ್ರಷ್ಟತೆ ಅತ್ಯಂತ ಹೆಚ್ಚಿನ ಮಟ್ಟದಲ್ಲಿದೆ. ನೀವು ನನ್ನನ್ನು ಸುಳ್ಳುಗಾರ ಎಂದು ಹೇಳುವುದಾದರೆ ಎರಡು ಕಾರಣಗಳಿರಬೇಕಾಗುತ್ತದೆ. ಒಂದು, ನೀವು ಬೇರೆ ಒಬ್ಬ ಸುಧಾರಕನನ್ನು ಮುಂದೆ ತರಬೇಕು. ಏಕೆಂದರೆ ಒಬ್ಬ ಸುಧಾರಕ ಆಗಮಿಸಬೇಕೆಂದು ಈ ಕಾಲಘಟ್ಟ ಇಚ್ಛಿಸುತ್ತದೆ. ಅದಲ್ಲವಾದರೆ ನೀವು ಅಲ್ಲಾಹನ ವಾಗ್ದಾನವನ್ನು ಸುಳ್ಳೆಂದು ಹೇಳಬೇಕಾಗುತ್ತದೆ. ಏಕೆಂದರೆ ಇಂತಹ ಬಿಗಡಾಯಿಸಿದ ಪರಿಸ್ಥಿತಿಯಲ್ಲಿ ಸುಧಾರಕನನ್ನು ಕಳುಹಿಸುವುದಾಗಿ ಅಲ್ಲಾಹನು ಮಾಡಿದ ವಾಗ್ದಾನಗಳು ಸುಳ್ಳೆಂದು ನೀವು ಹೇಳಬೇಕಾಗಬಹುದು. ಧರ್ಮದ ಸಂರಕ್ಷಣೆ ಯಾವ ಕಾರಣಕ್ಕೂ ಆಗಲೇಬೇಕಾಗಿದೆ. ಆದರೆ ಕೆಲವರು ಹೇಳುತ್ತಾರೆ, ಸಂರಕ್ಷಣೆಯ ಆವಶ್ಯಕತೆ ಇಲ್ಲ ಎಂದು. ಅಂತಹ ಜನರು ಬಹಳ ತಪ್ಪು ಮಾಡುತ್ತಿದ್ದಾರೆ. ಅವರು ಇಸ್ಲಾಮ್‌ನೊಂದಿಗೆ ಯಾವುದೇ ಸಂಬಂಧವಿಲ್ಲದ ಮತ್ತು ಇಸ್ಲಾಮಿನ ಬಗ್ಗೆ ನೋವನ್ನು ಹೊಂದದವರು ಆಗಿದ್ದಾರೆ. ಅಥವಾ ಕೋಣೆಗಳ ಅಂಧಕಾರದಲ್ಲಿ ಪರಿಪಾಲನೆಗೊಂಡವರು ಅವರಾಗಿದ್ದಾರೆ. ಅವರಿಗೆ ಬಾಹ್ಯ ಲೋಕದ ಸ್ಥಿತಿಯ ಬಗ್ಗೆ ತಿಳುವಳಿಕೆ ಇರುವುದಿಲ್ಲ. ಅಂತಹ ಜನರನ್ನು ಗಮನಿಸಬೇಕಾದ ಆವಶ್ಯಕತೆಯಿಲ್ಲ. ಆದರೆ ಹೃದಯದಲ್ಲಿ ಪ್ರಕಾಶ ಹೊಂದಿದವರು, ಇಸ್ಲಾಮ್‌ನೊಂದಿಗೆ ಸಂಬಂಧವನ್ನೂ ಪ್ರೀತಿಯನ್ನೂ ಹೊಂದಿದವರು ಕಾಲಘಟ್ಟದ ಸ್ಥಿತಿಯ ಬಗ್ಗೆ ಅರಿತವರಾಗಿದ್ದಾರೆ. ಅವರು ಅಂಗೀಕರಿಸಬೇಕಾಗುತ್ತದೆ ಈ ಕಾಲವು ಬಹಳ ಪ್ರಭಾವಶಾಲಿಯಾದ ಓರ್ವ ಸುಧಾರಕನು ಆಗಮಿಸಬೇಕಾದ ಕಾಲ ಎಂದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ನೀವು ನನ್ನನ್ನು ನಿರಾಕರಿಸುವುದಾದರೆ, ನನ್ನನ್ನು ಸುಳ್ಳುವಾದಿ ಎಂದು ಹೇಳುವುದಾದರೆ ನೀವು ವಾಸ್ತವಿಕವಾಗಿ ಅಲ್ಲಾಹನನ್ನೂ ಅವನ ಸಂದೇಶವಾಹಕರನ್ನೂ ಅಲ್ಲಗಳೆಯುತ್ತಿರುವಿರಿ. ನೀವು ತಿರಸ್ಕರಿಸುವುದು ನನ್ನನ್ನಲ್ಲ ನೀವು ಅಲ್ಲಾಹನನ್ನೂ ಅವನ ಸಂದೇಶವಾಹಕರನ್ನೂ ತಿರಸ್ಕರಿಸುತ್ತಿರುವಿರಿ. ಏಕೆಂದರೆ ನೀವು ನನ್ನನ್ನು ಸುಳ್ಳುಗಾರನೆಂದು ಹೇಳುವಾಗ ಅಲ್ಲಾಹನನ್ನು (ಮಆದಲ್ಲಾಹ್) ಸುಳ್ಳುಗಾರನೆಂದು ಹೇಳುತ್ತಿರುವಿರಿ. ಆಂತರಿಕ ಮತ್ತು ಬಾಹ್ಯ ದುರವಸ್ಥೆ ಮಿತಿಮೀರಿರುವಾಗ ಮತ್ತು ಅಲ್ಲಾಹನು إِنَّا نَحْنُ نَزَّلْنَا الذِّكْرَ وَإِنَّا لَهُ لَحَافِظُونَ **ಇನ್ನಾ ನಹ್‌ನು ನಝ್ಝಲ್‌ನಝ್ಝಿಕ್ರ ವ ಇನ್ನಾ ಲಹು ಲಹಾಫಿಝೂನ್** (ದಿಟವಾಗಿಯೂ ನಾವೇ ಈ ಉಪದೇಶವನ್ನು ಅವತೀರ್ಣಗೊಳಿಸಿದ್ದು, ಖಂಡಿತವಾಗಿಯೂ ನಾವೇ ಅದನ್ನು ಸಂರಕ್ಷಿಸುವೆವು) ಎಂದು ಹೇಳಿಯೂ ಜನರ ಸುಧಾರಣೆಗೆ ಯಾವ ವ್ಯವಸ್ಥೆಯನ್ನೂ ಮಾಡಲಿಲ್ಲ ಎಂದು ಹೇಳಿದಂತಾಗುತ್ತದೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಖಲೀಫರನ್ನು ನೇಮಿಸುವ ಬಗ್ಗೆ ಇರುವ ವಚನದಲ್ಲಿ ಹೀಗೆ ವಾಗ್ದಾನ ಮಾಡಿದ್ದಾನೆ. ಮೂಸಾ ಅಲೈಹಿಸ್ಸಲಾಮರ ಅನುಯಾಯಿಗಳಲ್ಲಿ ಖಲೀಫರನ್ನು ನೇಮಿಸಿದ ಹಾಗೆ

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಯಾಯಿಗಳಲ್ಲಿ ಸಹ ಖಲೀಫರನ್ನು ನೇಮಿಸುವನೆಂದು. ಆದರೆ (ಮಆದಲ್ಲಾಹ್) ಅಲ್ಲಾಹನು ಈ ವಾಗ್ದಾನವನ್ನು ನೆರವೇರಿಸಿಲ್ಲ ಎಂದಾಗುತ್ತದೆ. ಈಗ ಈ ಸಮುದಾಯದಲ್ಲಿ ಖಲೀಫರಿಲ್ಲ. ಇದಲ್ಲದೆ ಪವಿತ್ರ ಖುರ್‌ಆನ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮರನ್ನು ಮಸೀಲೆ ಮೂಸಾ ಎಂದು ಹೇಳಿರುವುದು ಸಹ ಸರಿಯಲ್ಲ ಎಂದು ಹೇಳಬೇಕಾಗುತ್ತದೆ (ಮಆದಲ್ಲಾಹ್). ಏಕೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯದೊಂದಿಗೆ ಹೋಲಿಕೆ ಹೊಂದಲು ಆವಶ್ಯಕವಾದುದೇನೆಂದರೆ, ಹಝ್ರತ್ ಮೂಸಾ ಅಲೈಹಿಸ್ಸಲಾಮರ ಸಮುದಾಯದಲ್ಲಿ ಹದಿನಾಲ್ಕನೆಯ ಶತಮಾನದಲ್ಲಿ ಒಬ್ಬ ಮಸೀಹ್ ಆಗಮಿಸಿದ ಹಾಗೆ ಮುಸ್ಲಿಮ್ ಸಮುದಾಯದಲ್ಲಿಯೂ ಹದಿನಾಲ್ಕನೆಯ ಶತಮಾನದಲ್ಲಿ ಒಬ್ಬ ಮಸೀಹ್ ಆಗಮಿಸುವುದು ಆವಶ್ಯಕವಾಗಿದೆ. ಇದೇ ರೀತಿ ಪವಿತ್ರ ಖುರ್‌ಆನಿನ ವಚನ وَآخَرِينَ مِنْهُمْ لَمَّا يَلْحَقُوا بِهِمْ **ವ ಆಖರೀನ ಮಿನ್‌ಹುಮ್ ಲಮ್ಮಾ ಯಲ್‌ಹಖೂ ಬಿಹಿಮ್.** (ಅವರೊಂದಿಗೆ ಇಷ್ಟರವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ.) ಎಂಬ ವಚನದಲ್ಲಿ ಒಬ್ಬ ಅಹ್ಮದೀ ಪ್ರತಿಪುರುಷನ ಆಗಮನದ ಸಮಾಚಾರ ನೀಡಲಾಗಿದೆ. ಈ ವಚನವನ್ನು ಸಹ ಸುಳ್ಳೆಂದು ಹೇಳಬೇಕಾದೀತು (ಮಆದಲ್ಲಾಹ್). ಇದೇ ರೀತಿ ಪವಿತ್ರ ಖುರ್‌ಆನಿನ ಬೇರೆ ಅನೇಕ ವಚನಗಳನ್ನು ಅಲ್ಲಗಳೆಯಬೇಕಾಗಬಹುದು.

ಯೋಚಿಸಿರಿ, ನನ್ನನ್ನು ಸುಳ್ಳು ಹೇಳುವವನೆಂದು ಆರೋಪಿಸುವುದು ಸುಲಭದ ಕೆಲಸವೇನೂ ಅಲ್ಲ. ಇದು ನಾನು ಸ್ವತಃ ಹೇಳುವ ಮಾತಲ್ಲ. ನಾನು ಅಲ್ಲಾಹನ ಹೆಸರಿನಲ್ಲಿ ಆಣೆಹಾಕಿ ಹೇಳುತ್ತೇನೆ. ಸತ್ಯವೇನೆಂದರೆ ನನ್ನನ್ನು ಬಿಟ್ಟುಬಿಡುವವನು, ನನ್ನನ್ನು ಸುಳ್ಳುಗಾರನೆಂದು ಹೇಳುವವನು ಅವನು ನಾಲಗೆಯಿಂದ ಹೇಳದೆ ತನ್ನ ಕರ್ಮದ ಮೂಲಕ ಹೇಳಿದರೂ ಅವನು ಪವಿತ್ರ ಖುರ್‌ಆನನ್ನು ಸುಳ್ಳೆಂದು ಹೇಳುವವನೂ ಅಲ್ಲಾಹನನ್ನು ಬಿಟ್ಟವನೂ ಆಗಿದ್ದಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೂ ಹೇಳುತ್ತಾರೆ: ನನ್ನನ್ನು ಸುಳ್ಳುಗಾರನೆಂದು ಹೇಳುವವನು ನನ್ನನ್ನಲ್ಲ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸುಳ್ಳುಗಾರನೆಂದು ಹೇಳುವವನಾಗಿದ್ದಾನೆ. ನನ್ನನ್ನು ಸುಳ್ಳುಗಾರನೆಂದು ಹೇಳಿ ನಿರಾಕರಿಸಲು ಧೈರ್ಯ ತೋರಿಸುವವನು ತನ್ನ ಹೃದಯದಲ್ಲಿ ಯೋಚಿಸಿ ಹೃದಯದಿಂದ ಫತ್ವ ಪಡೆದುಕೊಳ್ಳಲಿ– ತಾನು ಯಾರನ್ನು ಸುಳ್ಳುಗಾರನೆಂದು ಹೇಳುತ್ತಿದ್ದೇನೆಂದು.

ತನ್ನನ್ನು ನಿರಾಕರಿಸುವುದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಿರಾಕರಿಸಿದುದಕ್ಕೆ ಸಮವಾಗಿದೆ ಎಂಬುದನ್ನು ವಿಶದೀಕರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಾಗ್ದಾನ ಮಾಡಿದ್ದರು ಪ್ರತಿಯೊಂದು ಶತಮಾನದಲ್ಲಿ ಮುಜದ್ದಿದ್ ಆಗಮಿಸುವರೆಂದು. ಆ ವಾಗ್ದಾನ ಸಹ (ಮಆದಲ್ಲಾಹ್) ಸುಳ್ಳಾಗುವುದು. **ಇಮಾಮುಕುಮ್ ಮಿನ್‌ಕುಮ್** (ನಿಮ್ಮಿಂದಲೇ ನಿಮ್ಮ ಇಮಾಮ್) ಎಂದು ಹೇಳಿದುದು ಕೂಡಾ (ಮಆದಲ್ಲಾಹ್) ಸುಳ್ಳಾಗುವುದು. ಶಿಲುಬೆಯ ಪ್ರಾಬಲ್ಯದ ಕಾಲದಲ್ಲಿ ಒಬ್ಬ ಮಸೀಹ್ ಮತ್ತು ಮಹ್‌ದಿ ಆಗಮಿಸುವರೆಂಬ ಪೈಗಂಬರರ ಭವಿಷ್ಯ ನುಡಿ ಸಹ (ಮಆದಲ್ಲಾಹ್) ಸುಳ್ಳಾಗುವುದು. ಏಕೆಂದರೆ ಶಿಲುಬೆಯ ಪ್ರಾಬಲ್ಯ ನಾವು ಕಾಣುತ್ತಿದ್ದೇವೆ. ಆದರೆ ಬರಬೇಕಾದ ಇಮಾಮ್ ಬಂದಿಲ್ಲ ಎಂದು ಹೇಳಲಾಗುತ್ತದೆ. ಆದುದರಿಂದ ಒಬ್ಬನು ಈ ರೀತಿ ಹೇಳುವುದಾದರೆ ಅವನು ಕಾರ್ಯರೂಪದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದುದು ಸುಳ್ಳೆಂದು ಹೇಳುವವನಾಗುವುದಿಲ್ಲವೇ. ನಾನು ಸ್ಪಷ್ಟವಾಗಿ ಹೇಳುತ್ತೇನೆ, ನನ್ನನ್ನು ಸುಳ್ಳುಗಾರ ಎಂದು ಹೇಳುವುದು ಸುಲಭದ ಕೆಲಸವೇನೂ ಅಲ್ಲ. ನನ್ನನ್ನು ಕಾಫಿರ್ ಎಂದು ಹೇಳುವವನು ಮೊದಲು ಸ್ವತಃ ಕಾಫಿರ್ ಆಗುವನು. ನನ್ನನ್ನು ಧರ್ಮರಹಿತನೆಂದೂ ಪಥಭ್ರಷ್ಟನೆಂದೂ ಹೇಳುವವನು ಮೊದಲು ತನ್ನ ಪಥಭ್ರಷ್ಟತೆಯನ್ನೂ ಕಪ್ಪು ವದನವನ್ನೂ ಒಪ್ಪಿಕೊಳ್ಳಬೇಕಾಗುತ್ತದೆ. ನನ್ನನ್ನು ಪವಿತ್ರ ಖುರ್‌ಆನ್ ಮತ್ತು ಹದೀಸನ್ನು ಬಿಟ್ಟು ಬಿಡುವವನೆಂದು ಹೇಳುವವನು ಮೊದಲು ಸ್ವತಃ ಪವಿತ್ರ ಖುರ್‌ಆನನ್ನೂ ಹದೀಸನ್ನೂ ಬಿಟ್ಟು ಬಿಡುವವನಾಗುವನು. ಅವನೇ ಅವುಗಳನ್ನು ಬಿಡುವನು. ನಾನು ಪವಿತ್ರ ಖುರ್‌ಆನ್ ಮತ್ತು ಹದೀಸ್‌ಗಳನ್ನು ಸತ್ಯವೆಂದು ಸಾಬೀತುಗೊಳಿಸುವವನೂ ಅವು ನನ್ನನ್ನು ಸತ್ಯವಂತನೆಂದು ಸಾಬೀತುಗೊಳಿಸುವವುಗಳೂ ಆಗಿವೆ. ನಾನು ಪಥಭ್ರಷ್ಟನಲ್ಲ, ನಾನು ಮಹ್‌ದಿ ಆಗಿದ್ದೇನೆ. ನಾನು ಕಾಫಿರ್ ಅಲ್ಲ, ನಾನು **ಅನ ಅವ್ವಲುಲ್ ಮೂಮಿನೀನ್** (ನಾನು ಸತ್ಯ ವಿಶ್ವಾಸಿಗಳಲ್ಲಿ ಪ್ರಥಮನು) ಎಂಬುದರ ಸತ್ಯವಾದ ಪ್ರತೀಕವಾಗಿದ್ದೇನೆ. ಅಲ್ಲಾಹನು ನನಗೆ ತಿಳಿಸಿಕೊಟ್ಟಿರುವ ಸತ್ಯವಾದ ಮಾತುಗಳನ್ನೇ ನಾನು ಹೇಳುತ್ತಿದ್ದೇನೆ. ಅಲ್ಲಾಹನ ಬಗ್ಗೆ ದೃಢ ನಂಬಿಕೆ ಇರುವವನಿಗೆ, ಪವಿತ್ರ ಖುರ್‌ಆನನ್ನೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನೂ ಸತ್ಯವೆಂದು ನಂಬುವವನಿಗೆ ಇಷ್ಟು ಸಾಕ್ಷ್ಯಾಧಾರ ಸಾಕು. ನನ್ನ ಬಾಯಿಯಿಂದ ಆಲಿಸಿದ ನಂತರ ಮೌನವಾಗಿರಬೇಕು. ಆದರೆ ನಿರ್ಭಯನಾಗಿ ವರ್ತಿಸುವವನಿಗೆ

ಚಿಕಿತ್ಸೆ ಏನಿದೆ? ಅಲ್ಲಾಹನು ಸ್ವತಃ ಅವನಿಗೆ ಮನವರಿಕೆ ಮಾಡಿಕೊಡುವನು.

ಮಸೀಹ್ ಮೌಊದರಿಗೆ ಸಂಬಂಧಿಸಿ ಕೆಲವು ದೃಷ್ಟಾಂತಗಳನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ವಾಸ್ತವಿಕವಾಗಿ ಈ ರೈಲುಬಂಡಿಯು ಸಹ ಮಸೀಹ್ ಮೌಊದ್‌ರ ಆಗಮನದ ದೃಷ್ಟಾಂತವಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಇದರ ಬಗ್ಗೆ ಸೂಚನೆ ಇದೆ. **ವ ಇಝುಲ್ ಇಶಾರು ಉತ್ತಿಲತ್** (ಹತ್ತು ತಿಂಗಳ ಗರ್ಭ ಧರಿಸಿರುವ ಒಂಟೆಗಳು ತ್ಯಜಿಸಲ್ಪಡುವುವು). ಧಾರ್ಮಿಕತೆ ತಕ್ವದೊಂದಿಗೆ ಸೇರಿರುತ್ತದೆ. ಈ ಜನರು ಚಿಂತಿಸುವುದಾದರೆ ಅವರಿಗೆ ಸ್ಪಷ್ಟವಾಗಿ ತಿಳಿಯುವುದು **ಲಯುತ್‌ರಕನ್ನಲ್ ಖಲಾಸ** (ಒಂಟೆಗಳು ತ್ಯಜಿಸಲ್ಪಡುವುವು) ಎಂದು ಹೇಳಿರುವುದು ರೈಲು ಬಂಡಿಯ ಕಡೆಗೆ ಸೂಚಿಸುತ್ತದೆ. ಈ ವಾಕ್ಯದಲ್ಲಿ ರೈಲು ಬಂಡಿಯನ್ನು ಸೂಚಿಸಿರದಿದ್ದಲ್ಲಿ ಹಾಗೆ ಹೇಳುವವರು, ಯಾವುದರ ಬದಲಿಗೆ ಒಂಟೆ ತ್ಯಜಿಸಲ್ಪಡುವುದು ಎಂದು ವಿವರಿಸಬೇಕು. ಮಸೀಹರ ಆಗಮನದ ಕಾಲದಲ್ಲಿ ಸಂಚಾರ ವ್ಯವಸ್ಥೆ ಸುಲಭವಾಗುವುದು ಎಂದು ಹಿಂದಿನ ಗ್ರಂಥಗಳಲ್ಲಿಯೂ ಬರೆಯಲಾಗಿದೆ. ವಾಸ್ತವಿಕವಾಗಿ ಎಷ್ಟೋ ದೃಷ್ಟಾಂತಗಳು ಈಡೇರಿವೆ. ಈ ಜನರು ಮೈದಾನದಿಂದ ಓಡಿ ಹೋಗಿದ್ದಾರೆ. ರಮಝಾನ್ ತಿಂಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳು ಸಂಭವಿಸಿದುದು ಮಹ್‌ದಿಯವರ ಆಗಮನದ ಚಿಹ್ನೆ ರೂಪದಲ್ಲಿರಲಿಲ್ಲವೇ. ಇದೇ ರೀತಿ ಸೃಷ್ಟಿಯ ಆರಂಭದಿಂದ ಇಂದಿನ ತನಕ ಪ್ರಯಾಣಕ್ಕೆ ಅನುಕೂಲವಾದ ಇಂತಹ ವ್ಯವಸ್ಥೆ ಎಂದೂ ಜಾರಿಗೊಂಡಿರಲಿಲ್ಲ.

ಒಟ್ಟಿನಲ್ಲಿ ಮಸೀಹ್ ಮೌಊದ್ ಆಗಮಿಸಿರುವರೆಂದು ದೃಷ್ಟಾಂತಗಳು ಸೂಚಿಸುತ್ತವೆ. ಈ ಜನರು ನಮ್ಮನ್ನು ನಂಬುವುದಿಲ್ಲವಾದರೆ ಬೇರೆ ಯಾರನ್ನಾದರೂ ಹುಡುಕಿ ಮಸೀಹ್ ಯಾರೆಂದು ಹೇಳಲಿ. ಏಕೆಂದರೆ ಮಸೀಹರ ಆಗಮನವನ್ನು ಸೂಚಿಸುವ ಎಲ್ಲಾ ದೃಷ್ಟಾಂತಗಳು ಈಡೇರಿವೆ. ಆದುದರಿಂದ ಒಳ್ಳೆಯ ಸಂಕಲ್ಪದೊಂದಿಗೆ ಮತ್ತು ಸಾತ್ವಿಕತೆಯೊಂದಿಗೆ ಸಾಕ್ಷ್ಯಾಧಾರಗಳನ್ನು ನೋಡಿರಿ ಮತ್ತು ಮನವರಿಕೆ ಮಾಡಿಕೊಳ್ಳಿರಿ. ನೀವು ಹಟಮಾರಿತನ ಹೊಂದಿದರೆ ನಿಮಗೆ ಏನೂ ಕಾಣಿಸಲಾರದು. ಆಗ ಪವಿತ್ರ ಖುರ್‌ಆನ್ ಸಹ ಮಾರ್ಗದರ್ಶನ ನೀಡದು. ಪ್ರತಿಯೊಬ್ಬ ಸತ್ಯಾನ್ವೇಷಿಯ ಕರ್ತವ್ಯವೇನೆಂದರೆ ಅವರು ನಮ್ಮ ವಾದಗಳ ಬಗ್ಗೆ ನಮ್ಮಿಂದ ಪುರಾವೆಗಳನ್ನು ಕೇಳಬೇಕು. ಪ್ರವಾದಿಗಳು ಯಾವ ಪುರಾವೆಗಳನ್ನು ನೀಡಿದರೋ ಅಂತಹ ಪುರಾವೆಗಳನ್ನು ನಾವು ಸಹ ನೀಡುವೆವು. ಪವಿತ್ರ ಖುರ್‌ಆನ್ ಮತ್ತು ಹದೀಸ್ ಪ್ರಕಾರವಿರುವ ಸಾಕ್ಷ್ಯಾಧಾರಗಳು ಹಾಗೂ ವೈಚಾರಿಕ ಸಾಕ್ಷ್ಯಾಧಾರಗಳು. ಅಂದರೆ ಇಂದಿನ ಕಾಲದ ಆವಶ್ಯಕತೆಗಳು. ಇವುಗಳಿಗೆ ಅನುಸಾರವಾಗಿ ನಮ್ಮಿಂದ ನಮ್ಮ ವಾದಗಳ ಬಗ್ಗೆ ಸಾಕ್ಷ್ಯಗಳನ್ನು ಆವಶ್ಯಪಡಲಿ. ನನ್ನ ಪರವಾಗಿ ಅಲ್ಲಾಹನು ತೋರಿಸಿದ ದೃಷ್ಟಾಂತಗಳು ಸಹ ಇವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪವಿತ್ರ ಖುರ್‌ಆನಿನ **ಇಸ್ತಿಖ್‌ಲಾಫ್** ವಚನದಲ್ಲಿ (ಪವಿತ್ರ ಖುರ್‌ಆನ್ 24:56ರಲ್ಲಿ) ಅಲ್ಲಾಹನು ಖಿಲಾಫತ್ ಶೃಂಖಲೆ ಸ್ಥಾಪಿಸುವ ಬಗ್ಗೆ ಸ್ಪಷ್ಟವಾಗಿ ವಾಗ್ದಾನ ಮಾಡಿದ್ದಾನೆ. ಈ ಖಿಲಾಫತ್ ಹಿಂದಿನ ಕಾಲದ ಖಿಲಾಫತ್‌ಗೆ ಹೋಲಿಕೆ ಹೊಂದಿರುವುದಾಗಿ ಸಹ ಅಲ್ಲಾಹನು ಹೇಳಿದ್ದಾನೆ. ಅಲ್ಲಾಹನು ಹೀಗೆ ಹೇಳಿರುವನು, كَمَا اسْتَخْلَفَ الَّذِينَ مِن قَبْلِهِمْ **ಕಮಾಸ್ತಖ್‌ಲಫಲ್ಲದೀನ ಮಿನ್‌ಖಬ್‌ಲಿಹಿಮ್** (ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ). ಎರಡನೆಯದಾಗಿ ಅಲ್ಲಾಹನು ಖಿಲಾಫತ್ ಬಗ್ಗೆ ಮಾಡಿದ ವಾಗ್ದಾನ ಪ್ರಕಾರ ಮತ್ತು ಅದಕ್ಕೆ ಹೋಲಿಕೆಯಾಗುವ ರೀತಿಯಲ್ಲಿ ಹಝ್ರತ್ ಮೂಸಾ ಅಲೈಹಿಸ್ಸಲಾಮರ ಸಮುದಾಯದಲ್ಲಿ **ಖಾತಮುಲ್ ಖುಲಫಾ** (ಖಲೀಫರಲ್ಲಿ ಶ್ರೇಷ್ಠ) ಆಗಿ ಮಸೀಹ್ ಆಗಮಿಸಿದ ಹಾಗೆಯೇ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ **ಖಾತಮುಲ್ ಖುಲಫಾ** ಆಗಿ ಒಬ್ಬ ಮಸೀಹ್ ಆಗಮಿಸುವುದು ಆವಶ್ಯಕವಾಗಿದೆ. ಮೂರನೆಯದಾಗಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು, ಆಗಮಿಸಲಿರುವ ಮಸೀಹರ ಬಗ್ಗೆ **ಇಮಾಮುಕುಮ್ ಮಿನ್‌ಕುಮ್** (ನಿಮ್ಮಿಂದಲೇ ನಿಮ್ಮ ಇಮಾಮ್) ಆಗಿ ಆಗಮಿಸುವರು ಎಂದು ಹೇಳಿದ್ದಾರೆ. ನಾಲ್ಕನೆಯದಾಗಿ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ, ಪ್ರತಿಯೊಂದು ಶತಮಾನದಲ್ಲಿ ಒಬ್ಬ ಮುಜದ್ದಿದರನ್ನು ಧರ್ಮವನ್ನು ಪುನಶ್ಚೇತನಗೊಳಿಸಲು ಕಳುಹಿಸಲಾಗುವುದು ಎಂದು. ಈ ಶತಮಾನದಲ್ಲಿ ಒಬ್ಬ ಮುಜದ್ದಿದ್ ಆಗಮಿಸುವುದು ಆವಶ್ಯಕವಾಗಿತ್ತು. ಮುಜದ್ದಿದ್ ಮಾಡುವ ಕೆಲಸ ಭ್ರಷ್ಟತೆಯ ಸುಧಾರಣೆಯಾಗಿದೆ. ಇಂದಿನ ಕಾಲದ ಭ್ರಷ್ಟತೆ ಮತ್ತು ಅಸ್ತವ್ಯಸ್ತತೆಗೆ ಕಾರಣ ಎಲ್ಲದಕ್ಕಿಂತ ಮಿಗಿಲಾಗಿ ಕ್ರೈಸ್ತ ಧರ್ಮ ಪ್ರಚಾರವಾಗಿದೆ. ಆದುದರಿಂದ ಈ ಶತಮಾನದ ಮುಜದ್ದಿದ್, **ಕಾಸಿರುಸ್ಸಲೀಬ್** (ಶಿಲುಬೆಯನ್ನು ಮುರಿದು ಹಾಕುವವ) ಆಗಬೇಕಾದುದು ಆವಶ್ಯಕವಾಗಿತ್ತು. ಮತ್ತೊಂದು ರೀತಿಯಲ್ಲಿ ಆ ಮುಜದ್ದಿದರ ಹೆಸರು ಮಸೀಹ್ ಮೌಊದ್ ಎಂದಾಗಿದೆ. ಐದನೆಯದಾಗಿ, ಹಝ್ರತ್ ಮೂಸಾ ಅಲೈಹಿಸ್ಸಲಾಮರ ಸಮುದಾಯದ ಖಿಲಾಫತ್‌ಗೆ ಸಾದೃಶ್ಯರೂಪದಲ್ಲಿ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯದಲ್ಲಿ ಆಗಮಿಸುವ ಖಾತಮುಲ್ ಖುಲಫಾ ಹದಿನಾಲ್ಕನೆಯ ಶತಮಾನದಲ್ಲಿ ಬರಬೇಕಾದುದು ಆವಶ್ಯಕವಾಗಿತ್ತು. ಏಕೆಂದರೆ ಮೂಸಾ ಅಲೈಹಿಸ್ಸಲಾಮರ

ನಂತರ ಹದಿನಾಲ್ಕನೆಯ ಶತಮಾನದಲ್ಲಿ ಈಸಾ ಮಸೀಹ್ ಅಲೈಹಿಸ್ಸಲಾಮ್ ಆಗಮಿಸಿದ್ದರು. ಆರನೆಯದಾಗಿ, ಮಸೀಹ್ ಮೌಊದ್‌ರವರ ಚಿಹ್ನೆಯಾಗಿ ಸೂಚಿಸಿದವುಗಳಲ್ಲಿ ಬಹುತೇಕ ಚಿಹ್ನೆಗಳು ಕಾಣಿಸಿವೆ. ರಮಝಾನ್‌ನಲ್ಲಿ ಸೂರ್ಯ ಚಂದ್ರರಿಗೆ ಗ್ರಹಣ ಉಂಟಾಗುವುದು ಎಂಬ ದೃಷ್ಟಾಂತ ಎರಡು ಸಾರಿ ಈಡೇರಿದೆ. ಹಜ್ ಸ್ಥಗಿತಗೊಂಡದ್ದು, ಧೂಮಕೇತು ಕಾಣಿಸಿಕೊಂಡದ್ದು, ಪ್ಲೇಗ್ ಹಾವಳಿ, ರೈಲುಬಂಡಿಗಳ ಆಗಮನ, ಒಂಟೆಗಳು ತ್ಯಜಿಸಲ್ಪಟ್ಟದ್ದು ಮೊದಲಾದುವು ಈ ದೃಷ್ಟಾಂತಗಳಾಗಿವೆ. ಏಳನೆಯದಾಗಿ, ಸೂರತುಲ್ ಫಾತಿಹದಿಂದ ಸಹ ತಿಳಿಯುತ್ತದೆ, ಆಗಮಿಸಲಿರುವ ಮಸೀಹ್ ಇದೇ ಸಮುದಾಯದಿಂದ ಆಗಮಿಸುವರು ಎಂದು. ಹಾಗೆ ಒಂದಲ್ಲ ಎರಡಲ್ಲ ಅನೇಕ ದೃಷ್ಟಾಂತಗಳ ಮೂಲಕ ಸಾಬೀತುಗೊಂಡಿದೆ, ಬರಬೇಕಾದ ಮಸೀಹ್ ಇದೇ ಸಮುದಾಯದಿಂದ ಬರಬೇಕು ಮತ್ತು ಅವರು ಆಗಮಿಸುವ ಕಾಲ ಇದುವೇ ಎಂದು. ಅಲ್ಲಾಹನ ಇಲ್‌ಹಾಮ್ ಮತ್ತು ವಹೀ ಮೂಲಕ ನಾನು ಘೋಷಿಸುತ್ತೇನೆ, ಆಗಮಿಸಲಿದ್ದ ಮಸೀಹ್ ಮೌಊದ್ ನಾನೇ ಆಗಿರುವೆನು. ಅಲ್ಲಾಹನು ಪುರಾತನ ಕಾಲದಿಂದ ನುಬುವ್ವತ್ ಮಾರ್ಗದಲ್ಲಿ ಇರಿಸಿರುವ ಸಾಕ್ಷ್ಯಾಧಾರಗಳನ್ನು ನನ್ನಿಂದ, ಇಷ್ಟ ಪಡುವವರು ಪಡೆದುಕೊಳ್ಳಬಹುದು. ನನ್ನ ಸತ್ಯಸಾಕ್ಷ್ಯವಾಗಿ ಪ್ರಕಟವಾದ ದೃಷ್ಟಾಂತಗಳನ್ನು ಸಹ ನೋಡಿರಿ. ನನ್ನ ವಿರೋಧಿಗಳ ಸ್ಥಿತಿಯ ಕಡೆಗೆ ನೋಡುವಾಗ ನನಗೆ ಬಹಳ ದುಃಖವಾಗುತ್ತಿದೆ. ಆಗಮಿಸುವ ಮಸೀಹರ ಚಿಹ್ನೆಯಾಗಿ ಯಾವುದನ್ನು ಅವರು ಜನರ ಮುಂದೆ ಇರಿಸುತ್ತಿದ್ದರೋ ಈಗ ಆ ಚಿಹ್ನೆಗಳು ಕಾಣಿಸಿಕೊಂಡಾಗ ಅವುಗಳ ಸತ್ಯತೆ ಬಗ್ಗೆ ಆಕ್ಷೇಪಿಸುತ್ತಾರೆ. ಉದಾಹರಣೆಗೆ ಅವರು ಮೊದಲು ಸೂರ್ಯ ಚಂದ್ರರ ಗ್ರಹಣಗಳ ದೃಷ್ಟಾಂತಗಳನ್ನು ಆವಶ್ಯಪಡುತ್ತಿದ್ದರು. ಈಗ ಹೇಳುತ್ತಾರೆ ಆ ಹದೀಸು ಸರಿಯಾದುದಲ್ಲ ಎಂದು. ಯಾರಾದರೂ ಅವರೊಂದಿಗೆ ಕೇಳಲಿ, ಅಲ್ಲಾಹನು ಯಾವ ಹದೀಸನ್ನು ಸತ್ಯವಾದುದೆಂದು ಸಾಬೀತುಗೊಳಿಸಿರುವನೋ ಅದು ಈ ಜನರ ಹೇಳಿಕೆಯಿಂದ ಸುಳ್ಳಾಗಬಹುದೇ? ಖೇದಕರವಾಗುವುದೇನೆಂದರೆ ಈ ಜನರಿಗೆ ನಾಚಿಕೆಯಾಗುವುದಿಲ್ಲ. ಅವರು ತಮ್ಮ ಹೇಳಿಕೆಯಿಂದ ಕೇವಲ ಮಸೀಹ್ ಮೌಊದರನ್ನು ಸುಳ್ಳು ಹೇಳುವರೆಂದು ಹೇಳುವುದು ಮಾತ್ರವಲ್ಲ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನೂ ಸುಳ್ಳು ಹೇಳಿದರೆಂದು ಹೇಳಿದವರಾಗುತ್ತಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಸತ್ಯತೆಯನ್ನು ತಿಳಿದುಕೊಳ್ಳಲು ಅನುಸರಿಸಬೇಕಾದ ವಿಧಾನವನ್ನು ವಿವರಿಸುತ್ತಾ ಹೀಗೆ ಹೇಳಿದರು: ನೀವು ಸತ್ಯವನ್ನು ತಿಳಿಯಲು ಬಯಸುವುದಾದರೆ ನೀವು ನಿಮ್ಮ ನಮಾಝ್‌ಗಳಲ್ಲಿ ಪ್ರಾರ್ಥನೆ ಮಾಡುತ್ತಾ ಅಲ್ಲಾಹನಿಂದ ಸತ್ಯವನ್ನು ತಿಳಿಸಲು ಬೇಡಿಕೊಳ್ಳಿರಿ. ನಾನು ದೃಢವಾಗಿ ನಂಬುತ್ತೇನೆ, ಒಬ್ಬನು ದ್ವೇಷ ಮತ್ತು ಹಠದಿಂದ ಮುಕ್ತನಾಗಿ ಸತ್ಯವನ್ನು ಪ್ರಕಟಿಸಬೇಕೆಂದು ಅಲ್ಲಾಹನನ್ನು ಬೇಡಿಕೊಂಡರೆ ನಲ್ವತ್ತು ದಿವಸಗಳು ಮುಗಿತಾಯವಾಗುವ ಮೊದಲೇ ಅವನಿಗೆ ಸತ್ಯವು ತಿಳಿಯುವುದು. ಆದರೆ ಈ ಶರತ್ತುಗಳನ್ನು ಪಾಲಿಸಿಕೊಂಡು ಪ್ರಾರ್ಥನೆ ಮಾಡಿ ಅಲ್ಲಾಹನಿಂದ ಮಾರ್ಗದರ್ಶನ ಪಡೆಯಲು ಪ್ರಯತ್ನಿಸುವವರು ಬಹಳ ಕಡಿಮೆ ಇದ್ದಾರೆ. ಇಂತಹ ಜನರು ತಮ್ಮ ತಿಳಿಗೇಡಿತನದಿಂದ ಅಥವಾ ದ್ವೇಷ, ಹಠಗಳ ಕಾರಣದಿಂದ ಅಲ್ಲಾಹನ ಪ್ರೇಮಿಯನ್ನು ತಿರಸ್ಕರಿಸಿ ತಮ್ಮ ವಿಶ್ವಾಸಕ್ಕೆ ಭಂಗವುಂಟು ಮಾಡುತ್ತಾರೆ.

ಅಲ್ಲಾಹನು ಮುಸ್ಲಿಮರಿಗೆ ಬುದ್ಧಿ ನೀಡಲಿ. ಅವರು ಕೇವಲ ಮೌಲವಿಗಳ ಮಾತುಗಳನ್ನು ಕೇಳದೆ ತಮ್ಮ ಬುದ್ಧಿಯನ್ನೂ ಬಳಸಬೇಕು. ನಿಷ್ಠಾವಂತರಾಗಿ ಅಲ್ಲಾಹನಿಂದ ಸಹಾಯ ಬೇಡಿಕೊಳ್ಳಬೇಕು. ಅಲ್ಲಾಹನು ಮುಸ್ಲಿಮರ ಹೃದಯಗಳನ್ನು ತೆರೆಯಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿ, ಮುಸ್ಲಿಮ್ ಲೋಕ ಈಗಿನ ಕಾಲದಲ್ಲಿ ಎಂತಹ ವಿಚಿತ್ರ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿದೆಯೋ ಅದರಿಂದ ಹೊರಗೆ ಬರುವಂತಾಗಲಿ. ಅವರಿಗೆ ಈ ದುರವಸ್ಥೆಯಿಂದ ತಪ್ಪಿಸಿಕೊಂಡು ಓಡಿಹೋಗುವ ಬೇರೆ ಯಾವ ಮಾರ್ಗವೂ ಕಾಣಿಸುವುದಿಲ್ಲ. ಪಾಕಿಸ್ಥಾನದಲ್ಲಿ ಹೊಸ ಹೊಸ ಸಂಘಟನೆಗಳು ಪ್ರಾರಂಭವಾಗುತ್ತಾ ಇವೆ. **ಲಬ್ಬೈಕ್ ಯಾ ರಸೂಲಲ್ಲಾಹ್** ಎಂಬ ಹೆಸರಿನ ಹೊಸ ಒಂದು ಸಂಘಟನೆ ಈಗ ಪ್ರಾರಂಭವಾಗಿದೆ. ಅವರು ಮೆರವಣಿಗೆಯಲ್ಲಿ ಹೊರಟು ಮೊದಲು ಲಾಹೋರನ್ನು ಗೇರಾವ್ ಮಾಡಿದರು. ಅನಂತರ ಇಸ್ಲಾಮಾಬಾದನ್ನು ಗೇರಾವ್ ಮಾಡಿದರು. ಅನಂತರ ಇದೇ ಹೆಸರಿನ ಇನ್ನೊಂದು ಸಂಘಟನೆ ಸಹ ಗೇರಾವ್ ಮಾಡುತ್ತಿದೆ. ಅದು ಇಸ್ಲಾಮಾಬಾದನ್ನು ಸುತ್ತುವರಿದಿದೆ. ಯಾವುದೇ ಸರಕಾರ, ಯಾವುದೇ ಸೈನ್ಯ, ಯಾವುದೇ ಕಾನೂನು ಅವರನ್ನು ತಡೆಗಟ್ಟಲಾಗುವುದಿಲ್ಲ.

ನಿಜವಾಗಿ ನೋಡಿದರೆ **ಲಬ್ಬೈಕ್ ಯಾ ರಸೂಲಲ್ಲಾಹ್** ಎಂದು ಹೇಳುವವರು ಅಹ್ಮದಿಯರಾದ ನಾವಾಗಿದ್ದೇವೆ. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾತನ್ನು ಆಲಿಸಿದೆವು. ಅವರು ಹೇಳಿದ್ದರು: ನನ್ನ ಮಹ್‌ದೀ ಮಸೀಹ್ ಆಗಮಿಸಿದಾಗ ಅವರನ್ನು ನಂಬಿ ನನ್ನ ಸಲಾಮ್ ಹೇಳಬೇಕು ಎಂದು. ಲಬ್ಬೈಕ್ ಹೇಳುವ ಸರಿಯಾದ ರೀತಿ ಇದಾಗಿದೆ. ಈ ಜನರು ಇದನ್ನು ಮನವರಿಕೆ ಮಾಡಿಕೊಂಡಿದ್ದರೆ ಎಷ್ಟು ಚೆನ್ನಾಗಿತ್ತು.

ಅಲ್ಲಾಹನು ಲೋಕವನ್ನೂ, ಪಾಕಿಸ್ಥಾನವನ್ನೂ, ಪ್ರತಿಯೊಂದು ಮುಸ್ಲಿಮ್ ದೇಶವನ್ನೂ ಗಲಬೆ

ಗೊಂದಲಗಳಿಂದ ರಕ್ಷಿಸುವವನಾಗಲಿ. ಅಲ್ಲಾಹನು ಮುಸ್ಲಿಮರ ಮೇಲೆ ವಿಶಿಷ್ಟವಾಗಿ ದಯೆದೋರುವವನಾಗಲಿ. ಏಕೆಂದರೆ ಇಂದಿನ ಕಾಲದಲ್ಲಿ ಮುಸ್ಲಿಮರ ಸ್ಥಿತಿ ಹೇಗಿದೆ ಎಂದರೆ ಮುಸ್ಲಿಮ್ ಲೋಕದ ವಿರುದ್ಧ ರೂಪಿಸಲಾಗುತ್ತಿರುವ ಯೋಜನೆಗಳು ಬಹಳ ಭಯಾನಕವಾಗಿದೆ. ಮುಸ್ಲಿಮರು ಈಗಲೂ ಅದನ್ನು ಮನವರಿಕೆ ಮಾಡದಿದ್ದರೆ ಅನಂತರ ಅವರು ಪಶ್ಚಾತ್ತಾಪಪಡಬೇಕಾಗುವುದು. ಅಲ್ಲಾಹನು ದಯೆದೋರುವವನಾಗಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 17-11-2017.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon